

# ಶ್ರೀರಾಮಕೃಷ್ಣರ ದೃಷ್ಟಾಂತಚಿತ್ರ


ಒಂದು ನೀರು ಹಾವಿಗೆ ಕಪ್ಪೆಯು ದರ್ಶನವಾಗುತ್ತದೆ. ಆ ಕಪ್ಪೆ ತುಂಬ ದೊಡ್ಡದಾಗಿರುತ್ತದೆ. ಆದರೂ ಆ ಚಿಕ್ಕ ಹಾವಿಗೆ ಅದನ್ನು ತಿನ್ನಬೇಕೆಂಬ ಆಸೆಯಾಗುತ್ತದೆ.



ಹಾವು ಓಡಿಹೋಗಿ ಆ ಕಪ್ಪೆಗೆ ಬಾಯಿ ಹಾಕುತ್ತದೆ. ಆದರೆ ಅದನ್ನು ನುಂಗುವುದಕ್ಕೆ ಆಗುವುದೇ ಇಲ್ಲ, ಇತ್ತ ಉಗುಳುವುದಕ್ಕೂ ಆಗಲಿಲ್ಲ. ಹಾವಿಗೂ ಕಷ್ಟ. ಕಪ್ಪೆಗೂ ಕಷ್ಟ.



ಇನ್ನೊಂದು ಕಡೆ ಒಂದು ದೊಡ್ಡ ಘಟಸರ್ಪ ಕಪ್ಪೆಯನ್ನು ನೋಡುತ್ತದೆ.



ಕೂಡಲೇ ಕಪ್ಪೆ ಸರ್ಪದ ಬಾಯೊಳಗೆ. ಕಪ್ಪೆ ಎರಡು ಮೂರು ಬಾರಿ ಒಟಗುಟ್ಟುವುದರೊಳಗೆ ಸರ್ಪದ ಹೊಟ್ಟೆಯನ್ನು ಸೇರಿರುತ್ತದೆ.



ಚಿತ್ರ : ರಾಮಗೌತಮ

ಹಾಗೆಯೇ ಶ್ರೇಷ್ಠಗುರುವನ್ನು ಆಶ್ರಯಿಸಿದರೆ ಶಿಷ್ಯನ ಅಹಂಕಾರ ಸ್ವಲ್ಪ ಶಬ್ದ ಮಾಡುವುದರಲ್ಲೇ ನಾಶವಾಗಿಬಿಡುತ್ತದೆ. ಸಾಮಾನ್ಯ ಗುರುವನ್ನು ಆಶ್ರಯಿಸಿದರೆ ಗುರು ಶಿಷ್ಯರಿಬ್ಬರಿಗೂ ಕಷ್ಟ.